Closing of the Jabbar Block Arack shops in Malleswaram

:51 SRI P. RAMDEV (Malleswaram) Will the Chief Minister be pleased to state:—

(a) the action taken by Government on the assurance given by Chief Minister on the floor of the House last year for the closure of Toddy and Arrack Shops at Jabbar Block, Malleswaram ;

(b) whether suitable instructions were issued by Government based on the assurance on the floor of the House to the concerned during this year's Excise auction including these shops ?

SRI R. GUNDU RAO (Chief Minister).—

a) The question of closure of shops was examined and it was felt not necessary to close them.

(b) Does not arise in view of reply to clause (a) above

ಶ್ರೀ ಪಿ. ರಾಮದೇವ್.—ಅಧ್ಯಕ್ಷರೇ, ನಾನು ಮೂರನೇ ಬಾರಿ ಈ ಪ್ರಶ್ನೆಯನ್ನು ಸದನದಲ್ಲಿ ಎತ್ತುತ್ತಿದ್ದೇನೆ. ನನ್ನ ಪ್ರಶ್ನೆಗೆ ಉತ್ತರ ಕೊಡುವಾಗ ಈ ಅಂಗಡಿಗಳನ್ನು ಮುಚ್ಚುವ ಬಗ್ಗೆ ಪರಿಶೀಲಿಸಿ ಅದರ ಅವಶ್ಯಕತೆ ಕಂಡುಬಂದಿಲ್ಲ ಎಂದು ಹೇಳಿದ್ದಾರೆ. ಅದರ ವಿವರ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೇ, ೭-೨-೧೯೮೧ ರಲ್ಲಿ ಈ ಪ್ರದೇಶವನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ. ಈ ಆರ್ಯಾಕ್ ಮತ್ತು ಟಾಡಿ ಅಂಗಡಿ ಇರುವ ಪ್ರದೇಶ ಏನಿದೆ ಅದು It is situated in a narrow road adjoining the second main road of Vyalikaval Police Station. ಪೋಲೀಸ್ ಸ್ಟೇಷನ್ ಹತ್ತಿರ ಕೂಡ ಇದೆ. ಇಷ್ಟು ಮಾತ್ರವಲ್ಲದೆ ಯಾವ ರೀತಿಯಾದ ವಿದ್ಯಾಸಂಸ್ಥೆಗಳು, ಕಾಲೇಜುಗಳು ಅಥವಾ ಪ್ರೌಢಶಾಲೆಗಳು, ಪ್ರಾಥಮಿಕ ಶಾಲೆಗಳು, ದೇವಸ್ಥಾನ, ಹರಿಜನ ಕಾಲೋನಿ ಯಾವುದೂ ಇಲ್ಲ. ಮತ್ತು ಅಲ್ಲಿ ಹತ್ತಿರದಲ್ಲಿ ಯಾವ ಮನೆಗಳೂ ಇಲ್ಲ. ಸ್ಲಂಗಳು ಬಂದಿದೆ. No licences should be given for shops in residential colonies. ಲೈಸೆನ್ಸ್ ತೆಗೆದುಕೊಂಡು ಕಟ್ಟಿರುವ ಮನೆಗಳೂ ಆ ಭಾಗದಲ್ಲಿಲ್ಲ. ಅನ್‌ಆಥರೈಸ್ಡ್ ಆಕ್ಯುಪೇಷನ್ ಬಂದಿದೆ. ಆಥರೈಸ್ಡ್ ಮನೆ ಕೂಡ ಇಲ್ಲ. ೧೨-೧೩ ವರ್ಷದಿಂದ ಈ ಅಂಗಡಿ ಇದೆ. ಈ ತರಹ ಅನೇಕ ಕಡೆಯಿಂದ ಅಂಗಡಿಯನ್ನು ತೆಗೆಸಬೇಕು. ಎಂದು ದೂರುಗಳು ಬಂದಿವೆ. ಬೆಂಗಳೂರಿನಲ್ಲಿರುವ ಸುಮಾರು ೫೯ ಆರಾಕ್ ಮತ್ತು ಟಾಡಿ ಷಾಪ್‌ಗಳ ವಿರುದ್ಧ ದೂರುಗಳು ಬರುತ್ತಿವೆ. ಎಲ್ಲಾ ಪರಿಶೀಲನೆ ಮಾಡಿದ ಮೇಲೆ ದೇವಸ್ಥಾನ, ವಿದ್ಯಾ ಸಂಸ್ಥೆ ಮತ್ತು ಹೆಚ್ಚು ಮನೆ ವಸಾರಗಳು ಇಲ್ಲದೇ ಇದ್ದುದರಿಂದ ಈ ಅಂಗಡಿಯನ್ನು ತೆಗೆಯ ಬೇಕಾದ ಅವಶ್ಯಕತೆ ಇಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಪೋಲೀಸ್ ಸ್ಟೇಷನ್ ಪಕ್ಕದಲ್ಲಿದೆ ಎಂದು ಹೇಳಿದರು. ಆ ಕಾರಣದಿಂದ ಅದನ್ನು ತೆಗೆಯುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆಯೇ? ಪೋಲೀಸ್ ಸ್ಟೇಷನ್ ಪಕ್ಕದಲ್ಲಿರುವುದರಿಂದ ಬಹಳ ಅನುಕೂಲವಾಗಿದೆ, ಆದ್ದರಿಂದ ಅದು ಅಲ್ಲೇ ಇರಲಿ ಎಂದು ಹೇಳುತ್ತೀರಾ?

SRI M. VEERAPPA MOILY.—I can guess the graphic picture of the situation of the shop.

ಶ್ರೀ ಪಿ. ರಾಮದೇವ್.—ಸನ್ಮಾನ್ಯ ಮಂತ್ರಿಗಳು ಅಧಿಕಾರಿಗಳು ಕೊಟ್ಟಿರುವುದನ್ನು ಓದುತ್ತಿದ್ದಾರೆ. ಅವರ ಹೇಳಿಕೆಯನ್ನು ನಾನು ಡಿಸ್‌ಪ್ಯೂಟ್ ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಅಲ್ಲಿ ಯಾವುದೇ ಶಾಲೆಯಾಗಲೀ, ದೇವಸ್ಥಾನಗಳಾಗಲೀ ಮನೆಗಳಾಗಲಿ ಇಲ್ಲ ಎಂದು ಹೇಳಿದ್ದಾರೆ. ಆ ಹಂಡದ ಅಂಗಡಿಯಿಂದ ಒಂದು ಫರ್ಲಾಂಗಿನಲ್ಲಿ ಶನೇಶ್ವರ ದೇವಸ್ಥಾನ ಇದೆ. ಎರಡು ಮೂರು ಫರ್ಲಾಂಗಿನಲ್ಲಿ ಮೂರು ಪ್ರೈಮರಿ ಮತ್ತು ಅಪರ್ ಪ್ರೈಮರಿ ಶಾಲೆಗಳಿವೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಇಷ್ಟಾದರೂ ಶನಿ ಕಾಟ ಓಡಿಯಲ್ಲಿಲ್ಲವೇ?

ಶ್ರೀ ಪಿ. ರಾಮದೇವ್.—ಮಿಸ್‌ಲೀಡಿಂಗ್ ಸ್ಟೇಟ್‌ಮೆಂಟ್ ಯಾವರೀತಿ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೇನೆ. ಕಳೆದ ಬಾರಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದೆ. ನಾವು ಕಂಪ್ಲೇಂಟ್ ಕೊಟ್ಟರೆ ಯಾರು ಹೆಂಡ ಕುಡಿಯುತ್ತಾರೋ ಅವರ ಹತ್ತಿರ ಹೋಗಿ ಅವರ ಕೈಯಲ್ಲಿ ಈ ಅಂಗಡಿ ಇಲ್ಲೀ ಇರಬೇಕು ಎಂದು ಬರೆಸಿಕೊಂಡು ಬರುತ್ತಾರೆ. ಮಾನ್ಯ ಮಂತ್ರಿಗಳು ಹೇಳಿದಂತೆ ಆ ಅಂಗಡಿ ಪೋಲೀಸ್ ಸ್ಟೇಷನ್ ಎದುರುಗಡೆ ಇದೆ ಹೆಂಡ ಕುಡಿದು ಬಂದು ಪೋಲೀಸ್ ಸ್ಟೇಷನ್ ಮೇಲೆ ಉಚ್ಚೆ ಉಯ್ಯುತ್ತಾರೆ. ಪೋಲೀಸರು ಏನೂ ಮಾಡುವುದಿಲ್ಲ. ಏತಕ್ಕೆಂದರೆ ಅವರು ಕುಡಿದಿರುತ್ತಾರೆ. ಜನತಾ ಪ್ರತಿನಿಧಿಗಳಾಗಿ ಚುನಾವಣೆಯಲ್ಲಿ ಗೆದ್ದು ಬಂದಿರುವುದರಿಂದ ನಾವು ಹೇಳುತ್ತಿದ್ದೇವೆ ಅಲ್ಲಿ ಬಹಳ ತೊಂದರೆಯಾಗಿದೆ. ಅಲ್ಲಿ ಹರಿಜನರು ವಾಸವಾಗಿದ್ದಾರೆ, ಅಕ್ಕಪಕ್ಕದಲ್ಲಿ ಬೇಕಾದಷ್ಟು ಮನೆಗಳಿವೆ. ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗಿದ್ದು ಕಾರ್ಪೊರೇಷನ್ನಿನವರು ಟ್ಯಾಕ್ಸ್ ಹಾಕಿದ್ದಾರೆ. ಜನತಾ ಪ್ರತಿನಿಧಿಗಳಾದ ನಾವು ಆ ಜಾಗದಲ್ಲಿ ಹೆಂಡದಂಗಡಿ ಇರಕೂಡದು ಅದು ಹೋಗಬೇಕು ಎಂದು ಹೇಳುತ್ತಿದ್ದೇವೆ. ಆದರೆ ಸರ್ಕಾರ ಅಂಗಡಿ ಇರಬೇಕು ಎಂದು ಹೇಳುತ್ತಿದೆ. ನಾವೇನು ಮಾಡಬೇಕು ಹೇಳಿ.

ಅಧ್ಯಕ್ಷರು.—ಅಂಗಡಿ ತೆಗೆಯಬೇಕೋ, ಹೋಗಬೇಕೋ?

ಶ್ರೀ ಪಿ. ರಾಮದೇವ್.—ತೆಗೆಯಬೇಕು.

ಅಧ್ಯಕ್ಷರು.—ಹಾಗೆ ಹೇಳಿ. ಹೋಗಬೇಕು ಎಂದು ಹೇಳಿದರೆ...?

ಶ್ರೀ ಪಿ. ರಾಮದೇವ್.—ಆ ಅಂಗಡಿಯನ್ನು ತೆಗೆಯಬೇಕು ಎಂಬುದು ನನ್ನ ವಾದ. ಮಾನ್ಯ ಮಂತ್ರಿಗಳು ಹೇಳಿರತಕ್ಕ ವರದಿ ಸರಿಯಾಗಿಲ್ಲ. ಈಗಲೂ ನನ್ನ ಜೊತೆಯಲ್ಲಿ ಬರುವುದಕ್ಕೆ ತಾವು ಸಿದ್ಧರಾಗಿದ್ದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ದಯವಿಟ್ಟು ಅದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಿ. ಅಂದು ಬೆಂಗಳೂರು ನಗರ ವಿಸ್ತಾರವಾಗಿರಲಿಲ್ಲ. ಈಗ ಎಲ್ಲ ಕಡೆ ಮನೆಗಳು ಬಂದು ಬಿಟ್ಟಿವೆ. ಈ ಅಂಗಡಿಯಿಂದ ದುರ್ಬಲ ವರ್ಗದವರಿಗೆ ಬಹಳ ತೊಂದರೆಯಾಗಿದೆ. ದಯವಿಟ್ಟು ಅದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ಫರ್ಲಾಂಗ್ ಅಥವಾ ಎರಡು ಫರ್ಲಾಂಗ್ ದೂರವೆಂದು ನಾನು ಹೇಳಲಿಲ್ಲ. ಸಣ್ಣ ರಸ್ತೆ ಯಾವುದಾ ಇದೆ In that stretch of the road there are no such things... ...ಎಂದು ಹೇಳಿದೆನೇ ಹೊರತು ಫರ್ಲಾಂಗ್ ದೂರದಲ್ಲಿ ಶಾಲೆ ಅಥವಾ ದೇವಸ್ಥಾನವಿಲ್ಲವೆಂದು ಹೇಳಲಿಲ್ಲ. About liquor tragedy, we are fresh after the discussion ವೈಯಕ್ತಿಕವಾಗಿ ಹೇಳುವುದಾದರೆ ಎಲ್ಲೂ ಕೂಡ ಹೆಂಡದ ಅಂಗಡಿ ಇರಬಾರದೆಂಬ ಅಭಿಪ್ರಾಯವುಳ್ಳವನು ನಾನು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ, ಇದು ದೇಶದಲ್ಲಿ ಬಂದು ಬಿಟ್ಟಿದೆ. ಬೆಂಗಳೂರಿನಲ್ಲಿರುವ ಇಂಥಾ ಒಂದೊಂದು ಅಂಗಡಿಗಳಿಂದ ಸರಾಸರಿ ವರ್ಷಕ್ಕೆ ಹತ್ತು ಲಕ್ಷ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತಿದೆ. That dose not mean that we must open and this should be exposed to the school children and residential place. ..... ಶಾಲಾ ಕಾಲೇಜುಗಳ ಹತ್ತಿರವಿದ್ದರೆ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ವಠಾರದಿಂದ ದೂರ ಇಡಬೇಕಾಗುತ್ತದೆ. ಆದರೆ ಅಂಥಾ ಪ್ರಶ್ನೆ ಇಲ್ಲಿಲ್ಲ. Ofcourse, it is a pious wish of Sri Ramdev that it should not be seen. Sometimes we feel that the arrack shops and toddy shops should not be seen when the children, and decent people move about. Sometimes some feel it is indecent. But the personal views cannot prevail, I also wish

like Sri Ramdev that it should not be there. After all, prohibition is not in force. It has gone and we have seen the evils of prohtbition also. ಏನು ಮಾಡುವುದು? ಎಲ್ಲಿಗೆ ಹೋಗುವುದು? ಆದುದರಿಂದ, ಈ ಮಟ್ಟಿಗೆ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಅನೇಕ ಜನ ಅದು ಅಲ್ಲಿಂದ ತೆಗೆಯಬೇಕೆಂದು ಮನಸ್ಸು ಮಾಡಿರಬಹುದು. ಮಾನ್ಯ ಸದಸ್ಯರಿಗೆ ಅವರ ಕ್ಷೇತ್ರದ ಜನರನ್ನು ಆದರಿಂದ ವಿಮುಕ್ತರನ್ನಾಗಿ ಮಾಡಬೇಕೆಂಬ ಆಸೆ ಇರಬಹುದು. ಆದರೆ, ಅದು ನಡೆಯುವುದಿಲ್ಲ.

ಶ್ರೀ ಐ. ಪಿ. ಡಿ. ಸಾಲಪ್ಪ.—ಮಾನ್ಯ ಹಣಕಾಸಿನ ಮಂತ್ರಿಗಳು ಸರ್ಕಾರದ ನೀತಿಯನ್ನು ಸ್ಪಷ್ಟ ಪಡಿಸಿದ್ದಾರೆ. ಸಂತೋಷ. ಆದರೆ, ಎರಡು ಉದಾಹರಣೆಗಳನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಟ್ಯಾನರಿ ರಸ್ತೆಯಲ್ಲಿ ಹರಿಜನರು ವಾಸ ಮಾಡುವ ಕ್ವಾರ್ಟರ್ಸ್ ಪಕ್ಕದಲ್ಲೇ ಹೆಂಡದಂಗಡಿ ಇದೆ. ಅದನ್ನು ಅಲ್ಲಿಂದ ತೆಗೆಯಬೇಕೆಂದೂ ಜನ ಉಪವಾಸ ಮಾಡಿದ್ದಾರೆ. ಆಗ ಅದನ್ನು ತೆಗೆಯುವುದಾಗಿ ಆಶ್ವಾಸನೆ ಕೊಟ್ಟಿದ್ದರೂ ತೆಗೆದಿಲ್ಲ. ಇನ್ನೊಂದು, ಭಕ್ಷಿ ಗಾರ್ಡನ್‌ನಲ್ಲಿ ಹರಿಜನರು ವಾಸಿಸುವ ಮತ್ತು ದೇವಸ್ಥಾನವಿರುವ ಕಡೆಯೇ ಒಂದು ಹೆಂಡದಂಗಡಿ ಇದೆ. ಹರಿಜನರು, ದೇವಸಾ ನ ಮತ್ತು ವಿದ್ಯಾಶಾಲೆಗಳಿರುವ ಕಡೆಗಳಲ್ಲಿ ಹೆಂಡದಂಗಡಿಗಳನ್ನು ತಪ್ಪಿಸುತ್ತೇವೆಂದು ಮಾನ್ಯ ಸಚಿವರು ಹೇಳಿರುವ ನೀತಿಯನ್ನು ಈ ಎರಡು ಕಡೆಗಳಲ್ಲಿ ಪಾಲಿಸುವರೆ ಎನ್ನುವುದು ನನ್ನ ಮನವಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಎರಡು ಉದಾಹರಣೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಪಿ. ರಾಂದೇವ್,—ಮಂತ್ರಿಗಳ ಉತ್ತರವನ್ನು ಕೇಳಿದ ಮೇಲೆ ಕ್ಷೇತ್ರದ ಶಾಸಕರಿಗೆ ಈ ಅಧಿಕಾರವಿಲ್ಲವೆಂದು ಗೊತ್ತಾಗುತ್ತದೆ. ಇಂದಿನ ಮುಖ್ಯ ಮಂತ್ರಿಗಳು, ಹಿಂದಿನ ಸರ್ಕಾರಗಳು ಸಾರಾಯಿ ಕಂಟ್ರಾಕ್ಟರುದಾರರ ಜೇಬುಗಳಲ್ಲಿದ್ದವು ಎಂದು ಹೇಳಿದ್ದಾರೆ. ಆದರೆ, ಇಂದಿನ ಸರ್ಕಾರ ಸಾರಾಯಿಯೊಳಗೇ ಮುಳುಗಿ ಹೋಗಿದೆ ಎಂದು ನಾನು ಹೇಳಬೇಕಾಗಿದೆ ಸರ್ಕಾರ ಇಂತಹ ಅಸಹಾಯಕ ಪರಿಸ್ಥಿತಿಗೆ ಬಂದಿರುವುದರಿಂದ ಇದಕ್ಕೆ ಚಳವಳಿಯೊಂದು ಮಾರ್ಗವೆಂದು ಕಾಣುತ್ತದೆ, ಚಳವಳಿ ಮಾಡಿದರೆ ಪ್ರೋತ್ಸಾಹ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕುಡಿಯುವವರ ವಿರುದ್ಧ ಚಳುವಳಿ ಮಾಡಬಹುದು, ನನ್ನದೇನೂ ಆಕ್ಷೇಪವಿಲ್ಲ. Contractors will come and bid ಇದರಲ್ಲಿ ಯಾರನ್ನಾದರೂ ಎತ್ತಿ ಕಟ್ಟಿ ಬಿಡ್‌ನ್ನು ಏರಿಸಬೇಕೆಂದು ಸರ್ಕಾರ ಪ್ರವೇಶ ಮಾಡಿಲ್ಲ. In fact, it is we, who have kept these excise contractors under check and balance and they are being kept away from any of the administrative set up.

ಶ್ರೀ ಭೀಮಣ್ಣ ಖಂಡ್ರೆ.—ಇವತ್ತು ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ.

ಅಧ್ಯಕ್ಷರು.—ಅದಕ್ಕೆ ನಾವೂ—ನೀವೂ ಜವಾಬ್ದಾರರಲ್ಲ.

Balgeri Project in Haliyal Taluk.

440 SRI V. M. GHADI (Haliyal). Will the Minister of State for Major and Medium Irrigation be pleased to state.—

(a) whether the investigation work of Balgeri (Dusgi) Project in Haliyal Taluk, Karwar Dist was commenced ;

(b) whether it is not a fact that Karnataka Power Corporation has stopped the said investigation work and, if so, when and the reasons for the same,